**ದಿನಾಂಕಃ 24-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 1,2,4,6 ರಿಂದ 8 ನೇ ಪ್ರತಿವಾದಿಗಳ ಪರ ಶ್ರೀ ಬಿ ಹೆಚ್ ಬಿ ವಕೀಲರಿಂದಃ**

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಒದಲು ಬರೆಯಲು ಬರುತ್ತದೆ. ನಾವು ದಾವೆಯೊಂದಿಗೆ ಹಾಜರುಪಡಿಸಿದ ತಿದ್ದುಪಡಿ ವಂಶವೃಕ್ಷದಲ್ಲಿ ಕುಟುಂಬದ ಎಲ್ಲಾ ಸದಸ್ಯರುಗಳನ್ನು ಸೇರಿಸಿಲ್ಲ ಎಂದರೆ ಸಾಕ್ಷಿಯೂ ದಾವೆಯಲ್ಲಿ ಸೇರಿಸಿದ್ದೇವೆ ಎಂದು ನುಡಿಯುತ್ತಾರೆ. ನನ್ನ ಅಜ್ಜ ಬೀಮಪ್ಪ 1977 ರಲ್ಲಿ ತೀರಿಕೊಂಡ ನಂತರ ನನ್ನ ತಂದೆ ಹಾಗೂ ಅವರ ಸಹೋದರರು ಕುಟುಂಬದ ಆಸ್ತಿಗಳನ್ನು 1992 ರಲ್ಲಿ ಪಾಲು ಮಾಡಿಕೊಂಡು ಅವರವರ ಹಿಸ್ಸೆಗೆ ಬಂದ ಆಸ್ತಿಗಳನ್ನು ಕಬ್ಜಾ ಹೊಂದಿ ಸಾಗುವಳಿ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ 4 ನೇ ಪ್ಯಾರಾದಲ್ಲಿ ಕುಟುಂಬದ ಆಸ್ತಿಗಳನ್ನು ಅಪಸಾತ್ ವಾಟ್ನಿಯ ಮೂಲಕ ಹಂಚಿಕೆ ಮಾಡಲಾಗಿದೆ ಹಾಗೂ ಡ ಎಂಟ್ರಿಗಳು ಸಹ ಸರ್ಟಿಫೈಡ್ ಆಗಿದೆ ಎಂದು ನೀವೇ ಹೇಳಿರುತ್ತೀರಿ ಎಂದರೆ ಸರಿಯಲ್ಲ. ಮತ್ತೆ ಸಾಕ್ಷಿಯೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಒದಿ ಆಗಿದೆ ಎಂದು ನುಡಿಯುತ್ತಾರೆ. ಸದರಿ ಜಮೀನುಗಳಿಗೆ ಸಂಬಂದಪಟ್ಟಂತೆ ಡ ಎಂಟ್ರಿ ಆದ ಬಗ್ಗೆ ಕಂದಾಯ ಇಲಾಖೆಯಲ್ಲಿ ಪ್ರಶ್ನಿಸಿದ್ದೀರಾ ಎಂದರೆ ಇಲ್ಲ. 1992 ರಲ್ಲಿ ನನ್ನ ತಂದೆ ಹಾಗೂ ಸಹೋದರರ ಮದ್ಯ ಕುಟುಂಬದ ಆಸ್ತಿಗಳನ್ನು ಪಾಲು ಮಾಡಿಕೊಂಡು ಆ ಪ್ರಕಾರ ಡ ಎಂಟ್ರಿಗಳು ಆದ ನಂತರ ಇಲ್ಲಿಯವರೆಗೆ ಅವುಗಳನ್ನು ಪ್ರಶ್ನೆ ಮಾಡಿದ್ದೀರಾ ಎಂದರೆ ಇಲ್ಲ. ಪ್ರಸ್ತುತ ದಾವಾ ಆಸ್ತಿಗಳು 1992 ರಲ್ಲಿ ವಾಟ್ನಿಯಾದ ಪ್ರಕಾರ ನನ್ನ ತಂದೆಗೆ ಹಂಚಿಕೆಯಾದ ಆಸ್ತಿಗಳು ಆಗಿರುತ್ತವೆ ಎಂದರೆ ಸರಿಯಲ್ಲ. ನನ್ನ ಹಿರಿಯ ಅಕ್ಕ ಲಕ್ಷ್ಮೀ. ನನ್ನ ಮದುವೆ 2006 ರಲ್ಲಿ ಆಗಿದೆ. ನನ್ನ ಹಿರಿಯ ಅಕ್ಕ ಲಕ್ಷ್ಮಿಯ ಮದುವೆ ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ ಆಗ ನಾನು ಚಿಕ್ಕವಳಿದ್ದೇನು. ನನ್ನ ಮದುವೆ ಆಗುವ 10 ವರ್ಷಗಳ ಪೂರ್ವದಲ್ಲಿ ನನ್ನ ಅಕ್ಕ ಲಕ್ಷ್ಮೀಯ ಮದುವೆ ಆಗಿರುತ್ತದೆ ಎಂದರೆ ಸುಮಾರು 15 ವರ್ಷ ಆಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಹಾಗೂ ನನ್ನ ಅಕ್ಕಂದಿರ ಮದುವೆಯ ಖರ್ಚು ವೆಚ್ಚಕ್ಕೆ ನನ್ನ ತಂದೆಯವರು ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯವರು ದಾವೆಯಲ್ಲಿ ಸಲ್ಲಿಸಿದ ತಕರಾರನ್ನು ನೋಡಿದ್ದೀರಾ ಎಂದರೆ ನೋಡಿರುತ್ತೇನೆ. ಅದನ್ನು ಒತ್ತಾಯಪೂರ್ವಕವಾಗಿ ನನ್ನ ತಂದೆಯವರಿಂದ ಹಾಕಿಸಿರುತ್ತಾರೆ ಎಂದು ನುಡಿಯುತ್ತಾರೆ. ಹಾಗೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹಿರಿಯ ಅಕ್ಕ ಹಾವೇರಿಯಲ್ಲಿ , 2 ನೇ ಅಕ್ಕ ಕಿತ್ತೂರಿನಲ್ಲಿ , 3 ನೇದವಳು ಹರಪನಹಳ್ಳಿಯಲ್ಲಿ ವಾಸವಾಗಿದ್ದಾಳೆ. ನಾನು ಮೆಡ್ಲೇರಿಯಲ್ಲಿ ವಾಸವಾಗಿರುತ್ತೇನೆ. ನನ್ನ ತಮ್ಮ 2005 ರಲ್ಲಿ ಆಕಸ್ಮಿಕವಾಗಿ ತೀರಿಕೊಂಡಿರುತ್ತಾರೆ. ನನ್ನ ತಾಯಿ ನದಿಹರಳಹಳ್ಳಿಯಲ್ಲಿ ಒಟ್ಟಿಗೆ

ವಾಸವಾಗಿದ್ದರು. ಸಾಕ್ಷಿಯೂ ಸ್ವ ಇಚ್ಛೆಯಿಂದ ನನ್ನ ತಾಯಿಯನ್ನು ಹೊರಗೆ ಹಾಕಿದ್ದರಿಂದ ಎರಡುವರೆ ಮೂರು ವರ್ಷದಿಂದ ನನ್ನ ಕಡೆ ವಾಸವಾಗಿದ್ದಾರೆ. ನನ್ನ ತಂದೆಯವರು ತಮ್ಮ ಪಾಲಿಗೆ ಬಂದ ಮನೆಯ ಆಸ್ತಿಯು ಹಾಳು ಬಿದ್ದು ಹೋಗಿದ್ದು ಮನೆ ಕಟ್ಟಿಕೊಂಡಿಲ್ಲ ಎಂದರೆ ಸರಿಯಲ್ಲ. 2005 ರಲ್ಲಿ ನನ್ನ ಸಹೋದರ ತೀರಿಕೊಂಡ ನಂತರ ನನ್ನ ತಂದೆ ಒಂಟಿಯಾಗಿ ಜೀವನ ಮಾಡುತ್ತಿದ್ದು ಅವರ ಜೊತೆ ನನ್ನ ತಾಯಿ ಜೀವನ ಮಾಡುತ್ತಿಲ್ಲ ಎಂದರೆ ಈಗ ಎರಡು ವರ್ಷಗಳಿಂದ ನನ್ನ ತಾಯಿಯವರು ನಮ್ಮ ಜೊತೆ ಬಂದು ಇರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಳೆದ 3 - 4 ವರ್ಷಗಳಿಂದ ನನ್ನ ತಂದೆ 1 ನೇ ಪ್ರತಿವಾದಿ ದುಶ್ಚಟಗಳಿಗೆ ಬಲಿಯಾಗಿ ಸಾರಾಯಿ ಕುಡಿದು ಒಡಾಡಾತ್ತಾ ಊರಲ್ಲಿ ಇರದೇ ಬೇರೆ ಕಡೆಗೆ ಒಡಾಡುತ್ತಾ ಅವಿಭಕ್ತ ಹಿತಾಸಕ್ತಿಯನ್ನು ಹಾಳು ಮಾಡುತ್ತಾ ಬಂದಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ತಯಾರು ಮಾಡುವ ಸಮಯದಲ್ಲಿ 2 ನೇ ಪ್ರತಿವಾದಿ ಬಿಎಸ್ ಎನ್ ಎಲ್ ನಲ್ಲಿ ಸೇವೆ ಸಲ್ಲಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ದಾವಣಗೆರೆಯ ಬಿ ಎಸ್ ಎಲ್ ಎಲ್ ನಲ್ಲಿ ಸೇವೆ ಸಲ್ಲಿಸುತ್ತಿದ್ದರು ಎಂದು ನುಡಿಯುತ್ತಾರೆ. ಯಾವ ದಾಖಲೆಗಳನ್ನು ನೋಡಿ ಈ ವಿಚಾರವನ್ನು ಬರೆಸಿದ್ದೀರಿ ಎಂದರೆ ಸಾಕ್ಷಿಯೂ ಮೌನವಾಗಿ ನಿಂತಿರುತ್ತಾರೆ. 2 ನೇ ಪ್ರತಿವಾದಿಯ ಎಳಿಗೆಯನ್ನು ಸಲಿಸಲಾರದೇ ನನ್ನ ಚಿಕ್ಕಪ್ಪ ಮತ್ತು ನನ್ನ ತಂದೆಯ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.